# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1404
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 30.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿರುವ KSRTC ಬಸ್ ಡಿಪೋ ಘಟಕಗಳೆಷ್ಟು; ಪ್ರತಿಯೊಂದು ಡಿಪೋಗಳಲ್ಲಿರುವ ಸುಸಜ್ಜಿತವಾದ ಮತ್ತು ಅನುಪಯುಕ್ತ ಬಸ್‌ಗಳ ಸಂಖ್ಯೆ ಎಷ್ಟು; ಈ ಡಿಪೋಗಳಲ್ಲಿನ ಮಾಸಿಕ, ವಾರ್ಷಿಕ ಆದಾಯ ಮತ್ತು ಖರ್ಚು ಎಷ್ಟು; (ತಾಲ್ಲೂಕುವಾರು, ಘಟಕವಾರು ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಕ.ರಾ.ರ.ಸಾ.ನಿಗಮದ 09 ಘಟಕಗಳು ಕಾರ್ಯನಿರ್ವಹಿಸುತ್ತಿವೆ.<br><br>ಘಟಕಗಳಲ್ಲಿರುವ ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿದ್ದು, ಇವುಗಳಲ್ಲಿ ಯಾವುದೇ ಅನುಪಯುಕ್ತ ವಾಹನಗಳು ಇರುವುದಿಲ್ಲ.<br><br>ಘಟಕವಾರು ಬಸ್ಸುಗಳು, ಮಾಸಿಕ, ವಾರ್ಷಿಕ ಸಾರಿಗೆ ಆದಾಯ ಮತ್ತು ಒಟ್ಟು ಖರ್ಚಿನ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ | ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಖರೀದಿಸಿರುವ ಹೊಸ ಬಸ್‌ಗಳ ಸಂಖ್ಯೆ ಎಷ್ಟು; ಅದರ ಮೊತ್ತವೆಷ್ಟು; (ತಾಲ್ಲೂಕುವಾರು, ಘಟಕವಾರು ವಿವರ ನೀಡುವುದು) | ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಖರೀದಿಸಿರುವ ಹೊಸ ಬಸ್‌ಗಳ ವಿವರಗಳು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ | ಹಾಸನ ಜಿಲ್ಲೆಯಲ್ಲಿ ಅನುಪಯುಕ್ತ ಬಸ್‌ಗಳ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; ಅನುಪಯುಕ್ತ ಬಸ್‌ಗಳಿಂದ ಬಂದ ಆದಾಯ ಎಷ್ಟು; (ತಾಲ್ಲೂಕುವಾರು, ಘಟಕವಾರು ವಿವರ ನೀಡುವುದು) | ಹಾಸನ ಜಿಲ್ಲೆಯಲ್ಲಿ ಅನುಪಯುಕ್ತ ಬಸ್‌ಗಳ ವಿಲೇವಾರಿ ಪ್ರಕ್ರಿಯೆಯನ್ನು ಮೆ॥ ಎಂ.ಎಸ್.ಟಿ.ಸಿ. (ಭಾರತ ಸರ್ಕಾರದ ಒಂದು ಉದ್ಯಮ) ರವರ ಹರಾಜು ತಂತ್ರಾಂಶದ ಮೂಲಕ ವಿಲೇವಾರಿ ಮಾಡಲಾಗುತ್ತದೆ.<br><br>ಕಳೆದ 5 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಅನುಪಯುಕ್ತ ಬಸ್‌ಗಳ ಮಾರಾಟದಿಂದ ಸಂಗ್ರಹವಾದ ಆದಾಯದ ವಿವರ ಕೆಳಕಂಡಂತಿದೆ: |

| | | |
|---|---|---|
| | | ವರ್ಷ / ಮೊತ್ತ (ರೂ. ಕೋಟಿಗಳಲ್ಲಿ): 2017-18 – 0.37; 2018-19 – 0.13; 2019-20 – 0.14; 2020-21 – 1.00; 2021-22 – 2.12<br>ತಾಲ್ಲೂಕುವಾರು/ ಘಟಕವಾರು ಮಾಹಿತಿ ಲಭ್ಯವಿರುವುದಿಲ್ಲ. |
| ಈ | ಹಾಸನ ಜಿಲ್ಲೆಯ ವ್ಯಾಪ್ತಿಯ ಹೆಚ್ಚಿನ ಗ್ರಾಮೀಣ ಭಾಗಗಳಿಗೆ ಸಮರ್ಪಕ ಸಾರಿಗೆ ಸಂಪರ್ಕ ಕಲ್ಪಿಸದೇ ಶಾಲಾ ಮಕ್ಕಳು, ವಯೋವೃದ್ಧರು, ನಾಗರೀಕರುಗಳು ಓಡಾಡಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿನ 2452 ಗ್ರಾಮಗಳ ಪೈಕಿ 2451 ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಕಲೇಶಪುರ ತಾಲ್ಲೂಕು ವ್ಯಾಪ್ತಿಯ ಅತ್ತಿಗಾನಹಳ್ಳಿ ಗ್ರಾಮದ ರಸ್ತೆಯು ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯವಾಗಿರದ ಕಾರಣ ಸದರಿ ಗ್ರಾಮಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.<br><br>ಮುಂದುವರೆದು, ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿನ ಸಾರ್ವಜನಿಕ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ 374 ಅನುಸೂಚಿಗಳಿಂದ 3029 ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br><br>ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ದಟ್ಟಣೆ/ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಉ | ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಸಾರಿಗೆ ಟಿಕೆಟ್ ತಪಾಸಣಾ ನಿರೀಕ್ಷಕರುಗಳ ಸಂಬಳಕ್ಕೆ ವಿನಿಯೋಗಿಸಿರುವ ಮೊತ್ತವೆಷ್ಟು; ಈ ವಿಭಾಗದ ಟಿಕೆಟ್ ತನಿಖಾ ಪ್ರಕರಣದಿಂದ ನಿಗಮಕ್ಕೆ ಬಂದ ಆದಾಯವೆಷ್ಟು; (ವಾರ್ಷಿಕವಾರು, ತಾಲ್ಲೂಕುವಾರು ವಿವರ ನೀಡುವುದು) | ಹಾಸನ ವಿಭಾಗದ ವಿಭಾಗೀಯ ಮಾರ್ಗ ತನಿಖಾ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಳೆದ 5 ವರ್ಷಗಳಲ್ಲಿ ರೂ.218.16 ಲಕ್ಷಗಳಷ್ಟು ವೇತನವನ್ನು ಪಾವತಿಸಲಾಗಿದೆ. ವಿಭಾಗದಲ್ಲಿ ಕಾರ್ಯಾಚರಣೆಯಾಗುವ ಸಾರಿಗೆಗಳ ಸಾರಿಗೆ ಆದಾಯವನ್ನು ಉತ್ತೇಜಿಸಲು, ಸಾರಿಗೆ ಆದಾಯದ ಸೋರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಮತ್ತು ಬಸ್ಸುಗಳಲ್ಲಿ |

<table>
<tr><td></td><td></td><td>ಪ್ರಯಾಣಿಸುವ ಪ್ರಯಾಣಿಕರು ಟಿಕೆಟ್ ಪಡೆದಿರುವ ಕುರಿತು ತಪಾಸಣೆ ಕೈಗೊಳ್ಳಲು ವಿಭಾಗೀಯ ತನಿಖಾದಳವಿದ್ದು, ಸದರಿ ತನಿಖಾದಳ ಶಾಖೆಯಿಂದ ಆದಾಯದ ಉತ್ಪಾದನೆಯನ್ನು ನಿರೀಕ್ಷಿಸಲಾಗುವುದಿಲ್ಲ.<br><br>ಮಾರ್ಗ ತನಿಖಾ ದಳದ ವತಿಯಿಂದ ಟಿಕೆಟ್ ರಹಿತ ಪ್ರಯಾಣಿಕರಿಂದ ಕಳೆದ 5 ವರ್ಷಗಳಲ್ಲಿ ರೂ.25.86 ಲಕ್ಷಗಳನ್ನು ದಂಡವನ್ನಾಗಿ ಆಕರಣೆ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.</td></tr>
<tr><td>ಊ</td><td>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಸಾರಿಗೆ ಬಸ್‌ಗಳಿಗೆ ವಿಮೆಯನ್ನು ಸಮರ್ಪಕವಾಗಿ ಸಂದಾಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು)</td><td>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿರುವ ಕ.ರಾ.ರ.ಸಾ.ನಿಗಮದ ಹಾಸನ ವಿಭಾಗದಲ್ಲಿರುವ ವಾಹನಗಳನ್ನು ವಿಮೆಗೆ ಒಳಪಡಿಸಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 7 ಟೀಆರ್‌ಇ 63, ದಿನಾಂಕ:06.01.1968ರನ್ವಯ ಆಂತರಿಕ ಆಸ್ತಿ ವಿಮಾ ನಿಧಿ ಯೋಜನೆಯನ್ನು ಅಳವಡಿಸಿಕೊಂಡಿರುವುದರಿಂದ ಸದರಿ ವಾಹನಗಳಿಗೆ ವಿಮೆಯಿಂದ ವಿನಾಯಿತಿ ಇರುತ್ತದೆ.</td></tr>
<tr><td>ಋ</td><td>ಸದರಿ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಬಸ್ ಅಪಘಾತದ ಪ್ರಕರಣಗಳ ಸಂಖ್ಯೆ ಎಷ್ಟು; ಇದರಿಂದ ಎಷ್ಟು ಮೊತ್ತದ ವಿಮಾ ಪರಿಹಾರ ನೀಡಲಾಗಿದೆ; ಇನ್ನೂ ಎಷ್ಟು ಪ್ರಕರಣ ಬಾಕಿ ಇವೆ; ಈ ಪ್ರಕರಣವನ್ನು ಇತ್ಯರ್ಥಪಡಿಸಲು ತೆಗೆದುಕೊಂಡ ಕ್ರಮವೇನು? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)</td><td>ಹಾಸನ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಒಟ್ಟು 297 ಬಸ್ ಅಪಘಾತಗಳು ಸಂಭವಿಸಿರುತ್ತದೆ.<br><br>ಹಾಸನ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಒಟ್ಟು 509 ಎಂ.ವಿ.ಸಿ. ಪ್ರಕರಣಗಳು ದಾಖಲಾಗಿರುತ್ತದೆ. ವರ್ಷಾವಾರು ವಿವರ ಕೆಳಕಂಡಂತಿದೆ:<br><br><table><tr><th>ವರ್ಷ</th><th>ಪ್ರಕರಣಗಳ ಸಂಖ್ಯೆ</th></tr><tr><td>2017-18</td><td>139</td></tr><tr><td>2018-19</td><td>146</td></tr><tr><td>2019-20</td><td>86</td></tr><tr><td>2020-21</td><td>47</td></tr><tr><td>2021-22</td><td>91</td></tr></table></td></tr>
</table>

| | |
|---|---|
| ಒಟ್ಟು | 509 |

ಕಳೆದ 5 ವರ್ಷಗಳಲ್ಲಿ ಬಸ್ ಅಪಘಾತದ ಪ್ರಕರಣಗಳಲ್ಲಿ ನೀಡಿರುವ ವಿಮಾ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿವೆ:

| ವರ್ಷ | ಮೊತ್ತ (ರೂ. ಕೋಟಿಗಳಲ್ಲಿ) |
|---|---|
| 2017-18 | 4.06 |
| 2018-19 | 3.79 |
| 2019-20 | 2.95 |
| 2020-21 | 2.06 |
| 2021-22 | 4.83 |

ಮಾರ್ಚ್-2022ರ ಅಂತ್ಯಕ್ಕೆ 181 ಎಂ.ವಿ.ಸಿ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿಯಿರುತ್ತವೆ. ಸದರಿ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳನ್ನು ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಸಂಸ್ಥೆಯ ವಕೀಲರಿಗೆ ಬಾಕಿ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನಗಳನ್ನು ನೀಡಲಾಗುತ್ತಿದೆ.

ಸಂಖ್ಯೆ: ಟಿಡಿ 350 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



... B SRIRAMULU, ID-MINBSR, TRANSPORT MINISTER ... on 20/12/2022 ...

ಅನುಬಂಧ - 2

**ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಖರೀದಿಸಿರುವ ಹೊಸ ಬಸ್‌ಗಳು ಹಾಗೂ ವೆಚ್ಚದ ವಿವರ**

| ಕ್ರ ಸಂ | ವಿಭಾಗ | ಘಟಕ | 2017-18 | 2018-19 | 2019-20 | 2020-21 | 2021-22 |
|---|---|---|---|---|---|---|---|
| 1 | ಹಾಸನ | ಹಾಸನ -1 | 15 | 7 | 1 | 3 | 0 |
| 2 | | ಹಾಸನ-2 | 19 | 4 | 3 | 2 | 0 |
| 3 | | ಚೆನ್ನರಾಯಪಟ್ಟಣ | 18 | 2 | 4 | 0 | 0 |
| 4 | | ರಾಮನಾಥಪುರ | 10 | 3 | 3 | 1 | 0 |
| 5 | | ಹೊಳೆನರಸೀಪುರ | 18 | 2 | 4 | 4 | 0 |
| 6 | | ಅರಕಲಗೂಡು | 14 | 0 | 6 | 0 | 0 |
| 7 | ಚಿಕ್ಕಮಗಳೂರು | ಅರಸೀಕೆರೆ | 17 | 2 | 4 | 3 | 0 |
| 8 | | ಸಕಲೇಶಪುರ | 19 | 3 | 3 | 0 | 0 |
| 9 | | ಬೇಲೂರು | 16 | 0 | 3 | 0 | 0 |
| ಒಟ್ಟು | | | 146 | 23 | 31 | 13 | 0 |
| **ಒಟ್ಟು ವೆಚ್ಚ (ರೂ. ಕೋಟಿಯಲ್ಲಿ) *** | | | **33.19** | **5.94** | **7.42** | **3.17** | - |

* ವೆಚ್ಚಕ್ಕೆ ಸಂಬಂಧಿಸಿದಂತೆ ಘಟಕವಾರು ಮಾಹಿತಿ ಲಭ್ಯವಿರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ. ನಿಗಮ

ಅನುಬಂಧ- 1

**ಹಾಸನ ಜಿಲ್ಲೆಯ ಘಟಕವಾರು ಬಸ್ಸುಗಳು, ಮಾಸಿಕ, ವಾರ್ಷಿಕ ಸಾರಿಗೆ ಆದಾಯ ಮತ್ತು ಒಟ್ಟು ಖರ್ಚಿನ ವಿವರ**

| ಕ್ರ ಸಂ | ವಿಭಾಗ | ಘಟಕ | ಒಟ್ಟು ಬಸ್ಸುಗಳು | (ರೂ. ಲಕ್ಷದಲ್ಲಿ) | | | |
|---|---|---|---|---|---|---|---|
| | | | | ಮಾಸಿಕ ಸಾರಿಗೆ ಆದಾಯ | ಮಾಸಿಕ ಒಟ್ಟು ವೆಚ್ಚ | ವಾರ್ಷಿಕ ಸಾರಿಗೆ ಆದಾಯ | ವಾರ್ಷಿಕ ಒಟ್ಟು ವೆಚ್ಚ |
| 1 | ಹಾಸನ | ಹಾಸನ -1 | 109 | 240.34 | 384.03 | 2884.04 | 4608.34 |
| 2 | | ಹಾಸನ-2 | 106 | 180.08 | 325.74 | 2160.99 | 3908.91 |
| 3 | | ಚನ್ನರಾಯಪಟ್ಟಣ | 96 | 182.05 | 337.65 | 2184.65 | 4051.74 |
| 4 | | ರಾಮನಾಥಪುರ | 78 | 153.97 | 271.88 | 1847.69 | 3262.59 |
| 5 | | ಹೊಳೆನರಸೀಪುರ | 95 | 178.70 | 322.00 | 2144.40 | 3863.97 |
| 6 | | ಅರಕಲಗೂಡು | 78 | 159.83 | 281.81 | 1917.95 | 3381.66 |
| 7 | ಚಿಕ್ಕಮಗಳೂರು | ಅರಸೀಕೆರೆ | 102 | 207.05 | 340.85 | 2484.63 | 4090.18 |
| 8 | | ಸಕಲೇಶಪುರ | 90 | 167.17 | 289.43 | 2005.99 | 3473.16 |
| 9 | | ಬೇಲೂರು | 47 | 106.40 | 159.00 | 1276.82 | 1908.03 |

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ. ನಿಗಮ

ಅನುಬಂಧ-3

ಮಾರ್ಗ ತನಿಖಾ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನ ಹಾಗೂ ಟಿಕೆಟ್ ರಹಿತ ಪ್ರಯಾಣಿಕರಿಂದ ಆಕರಣೆ ಮಾಡಿರುವ ದಂಡದ ವಿವರ

| ಸಂಖ್ಯೆ | ವರ್ಷ | ಮಾರ್ಗ ತನಿಖಾ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನ (ರೂ. ಲಕ್ಷದಲ್ಲಿ) | ಟಿಕೆಟ್ ರಹಿತ ಪ್ರಯಾಣಿಕರಿಂದ ಪಡೆದ ದಂಡದ ಮೊತ್ತ (ರೂ. ಲಕ್ಷದಲ್ಲಿ) |
|---|---|---|---|
| 1 | 2017-18 | 46.40 | 6.35 |
| 2 | 2018-19 | 46.03 | 6.84 |
| 3 | 2019-20 | 53.04 | 7.20 |
| 4 | 2020-21 | 38.39 | 2.69 |
| 5 | 2021-22 | 34.30 | 2.77 |
| ಒಟ್ಟು | | 218.16 | 25.86 |

ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ. ನಿಗಮ